# ಜಗಳಕ್ಕಾದರೂ ಮಂಡಳಿ ಬೇಕು!

**ಚಲನಚಿತ್ರ ಪ್ರಮಾಣ ಮಂಡಳಿಯ ಅಗತ್ಯ ಇದ್ದೇ ಇದೆ. ಆದರೆ ಓಬೀರಾಯನ ಕಾಲದ ನಿಯಮಗಳನ್ನು ಬದಲಾಯಿಸಬೇಕು ಎನ್ನುತ್ತಿದೆ ಗಾಂಧಿನಗರ.**

★ ಅಲೇಖ

'ಉಡ್ತಾ ಪಂಜಾಬ್' ಎನ್ನುವ ಹಿಂದಿ ಸಿನಿಮಾ ಹಳೆಯದೊಂದು ಚರ್ಚೆಗೆ ಹೊಸ ಚಾಲನೆ ನೀಡಿದೆ. ಕೇಂದ್ರ ಚಲನಚಿತ್ರ ಪ್ರಮಾಣ ಮಂಡಳಿ (ಸಿಬಿಎಫ್‌ಸಿ) ಯ ಅಗತ್ಯ ಇದೆಯೆ.. ಎನ್ನುವುದು ಈಗ ಕಾವು ಪಡೆದುಕೊಂಡಿರುವ ಹೊಸ ಚರ್ಚೆ. ಈ ಚರ್ಚೆ ಏಕಾಏಕಿ ಎದ್ದು ನಿಲ್ಲಲು ಕಾರಣ 'ಉಡ್ತಾ ಪಂಜಾಬ್' ಎನ್ನುವ ಹಿಂದಿ ಸಿನಿಮಾಕ್ಕೆ ಸಿಬಿಎಫ್‌ಸಿ ಮಾಡಿದ 13 ಕಟ್‌ಗಳು. ಈ ಕಟ್‌ಗಳ ಜತೆಗೆ ಕೆಲವು ವ್ಯಕ್ತಿಗಳು ಮತ್ತು ಸಂಸ್ಥೆಗಳು ಈ ಸಿನಿಮಾವನ್ನು ಬಿಡುಗಡೆ ಮಾಡಲು ಅವಕಾಶ ಕೊಡಬಾರದು ಎಂದು ಕೋರಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ಗೆ ಸಲ್ಲಿಸಿದ ಅರ್ಜಿಗಳು.

'ಉಡ್ತಾ ಪಂಜಾಬ್' ಸಿನಿಮಾದ ಚಿತ್ರಕಥೆ ಪಂಜಾಬ್‌ನಲ್ಲಿ ವ್ಯಾಪಕವಾಗಿರುವ ಮಾದಕದ್ರವ್ಯ ವ್ಯಸನಕ್ಕೆ ಸಂಬಂಧಿಸಿದ್ದು. ಸಿನಿಮಾ ಡ್ರಗ್‌ವಿರೋಧಿ ನಿಲುವನ್ನು ಹೊಂದಿದೆ. ಆದರೆ 'ಅದನ್ನು ಸಿನಿಮಾದಲ್ಲಿ ಹೇಳಿರುವ ರೀತಿ ಪಂಜಾಬ್‌ವಿರೋಧಿಯಾಗಿದೆ' ಎನ್ನುವುದು ಚಿತ್ರದ ಬಿಡುಗಡೆಗೆ ವಿರೋಧ ವ್ಯಕ್ತಪಡಿಸಿದವರ ವಾದ. ಪಂಜಾಬ್‌ನಲ್ಲಿ ಮಾದಕ ದ್ರವ್ಯ ಪಿಡುಗು ಅಷ್ಟೇನೋ ಜೋರಾಗಿ ಹಬ್ಬಿಲ್ಲ. ಈ ಸಿನಿಮಾ ನೋಡಿದರೆ ಇಡೀ ಪಂಜಾಬ್ ರಾಜ್ಯದ ವಿರುದ್ಧ ಕೆಟ್ಟ ಅಭಿಪ್ರಾಯ ಬರುತ್ತದೆ ಎನ್ನುವುದು ಚಿತ್ರದ ವಿರೋಧಿಗಳ ವಾದ.

ಎರಡು ಹಂತಗಳಲ್ಲಿ ಈ ಚಿತ್ರಕ್ಕೆ ವಿರೋಧ ಬಂತು. ಬಿಡುಗಡೆಯ ಸಮಯಕ್ಕೆ ಸರಿಯಾಗಿ ಬಾಂಬೆ ಹೈಕೋರ್ಟ್‌ನಲ್ಲಿ ಚಿತ್ರಕ್ಕೆ ತಡೆಯೊಡ್ಡಿ ಎಂದು ಅರ್ಜಿ ಸಲ್ಲಿಸಲಾಯಿತು. ಬಾಂಬೆ ಹೈಕೋರ್ಟ್ ಚಿತ್ರದ ಚಿತ್ರಕಥೆಯನ್ನು ತರಿಸಿ ಓದಿ, ತಡೆಯಾಜ್ಞೆ ನೀಡಲು ಸಾಧ್ಯವಿಲ್ಲ ಎಂದು ತೀರ್ಪು ನೀಡಿತು. ಆ ಬಳಿಕ ಪಂಜಾಬ್ ಹೈಕೋರ್ಟ್‌ನಲ್ಲಿ ಇನ್ನೊಂದು ಅರ್ಜಿ ಸಲ್ಲಿಕೆಯಾಯಿತು. ಆ ಅರ್ಜಿಯ ಹಿನ್ನೆಲೆಯಲ್ಲಿ, ಹೈಕೋರ್ಟ್ 'ಅಮಿಕಸ್ ಕ್ಯೂರಿ' ಒಬ್ಬರನ್ನು ನೇಮಿಸಿ ಸಿಬಿಎಫ್‌ಸಿ ಅಧಿಕಾರಿಗಳು ಮತ್ತು ಇತರರ ಜತೆ ಕುಳಿತು ಸಿನಿಮಾ ನೋಡಲು ಸೂಚಿಸಿತು. ಅಮಿಕಸ್ ಕ್ಯೂರಿ ನೀಡಿದ ವರದಿಯನ್ನು ಪರಿಶೀಲಿಸಿ ಬಳಿಕ 'ಸಿನಿಮಾ ಓಕೆ' ಎಂದು ತೀರ್ಪು ನೀಡಿತು.



ಪಂಜಾಬ್ ಹೈಕೋರ್ಟ್ ನೀಡಿದ ತೀರ್ಪಿನಲ್ಲಿ ಸಿಬಿಎಫ್‌ಸಿ ಕ್ರಮದ ಬಗ್ಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದು ಗಮನಾರ್ಹ ಅಂಶ. ಸಿಬಿಎಫ್‌ಸಿ ಈ ಚಿತ್ರಕ್ಕೆ ಒಟ್ಟು 13 ಕಟ್‌ಗಳನ್ನು ಸೂಚಿಸಿದ್ದನ್ನು ಆಕ್ಷೇಪಿಸಿದ ಹೈಕೋರ್ಟ್, ಕೇವಲ ಒಂದು ಕಟ್ ಸಾಕು ಎಂದಿತು. ಜತೆಗೆ ಮಂಡಳಿಯ ಕ್ರಮಕ್ಕೆ ಅತೃಪ್ತಿ ವ್ಯಕ್ತಪಡಿಸಿ ಛೀಮಾರಿ ಹಾಕಿತು.

ಈ ಮಧ್ಯೆ ವಿವಾದ ಸುಪ್ರೀಂಕೋರ್ಟ್ ಮೆಟ್ಟಿಲೇರಿತು. ಪಂಜಾಬ್ ಕೋರ್ಟ್‌ನಲ್ಲಿ ವಿಚಾರಣೆ ನಡೆಯುತ್ತಿದ್ದಾಗಲೇ ಚಿತ್ರವನ್ನು ನಿಷೇಧಿಸಬೇಕೆಂದು ಕೋರಿ ಸಲ್ಲಿಸಿದ ಅರ್ಜಿಯನ್ನು ಸುಪ್ರೀಂಕೋರ್ಟ್ ಒಂದೂವರೆ ಗಂಟೆ ಕಾಲ ಆಲಿಸಿತು. ಆದರೆ ನಿಷೇಧ ಅಥವಾ ತಡೆಯಾಜ್ಞೆಗೆ ನಿರಾಕರಿಸಿತು. 'ಹೈಕೋರ್ಟ್‌ನಲ್ಲಿ ತೀರ್ಪು ಬರಲಿ. ನಾವು ಹಸ್ತಕ್ಷೇಪ ಮಾಡುವುದಿಲ್ಲ' ಎಂದು ನ್ಯಾಯಮೂರ್ತಿಗಳು ಸ್ಪಷ್ಟವಾಗಿ ಹೇಳಿದರು.

ಈ ಎಲ್ಲ ಹಿನ್ನೆಲೆಯಲ್ಲಿ ಈಗ ಸಿಬಿಎಫ್‌ಸಿ (ಅಥವಾ ಜನಪ್ರಿಯ ಆಡುಮಾತಿನಲ್ಲಿ ಸೆನ್ಸಾರ್ ಮಂಡಳಿ) ಅಗತ್ಯ ಇದೆಯೆ ಎಂಬ ಚರ್ಚೆ ಶುರುವಾಗಿದೆ.

'ನಾನು ಅವನಲ್ಲ ಅವಳು' ಎಂಬ ಚಿತ್ರದ ಮೂಲಕ ಪ್ರಶಸ್ತಿಗಳನ್ನು ಬಾಚಿಕೊಂಡು ಸುದ್ದಿ ಮಾಡಿರುವ ನಿರ್ದೇಶಕ ಬಿ.ಎಸ್.ಲಿಂಗದೇವರು ಹಳೆಮನೆ ಅವರ ಪ್ರಕಾರ, — ಸಿಬಿಎಫ್‌ಸಿ ಎನ್ನುವ ಮಂಡಳಿ ಅತ್ಯಂತ ಅಗತ್ಯವಾಗಿ ಇರಬೇಕು. 'ಸಿನಿಮಾ ಮಾಡುವವರನ್ನು ತೀರಾ ಫ್ರೀ ಯಾಗಿ ಬಿಡುವುದು ಸರಿಯಲ್ಲ. ಏನೇ ಕಾನೂನುಗಳು ಇದ್ದರೂ ನಮ್ಮಲ್ಲಿ ಅದನ್ನು ದುರ್ಬಳಕೆ ಮಾಡುವವರೇ ಹೆಚ್ಚಿದ್ದಾರೆ. ಹಾಗಾಗಿ ಪ್ರಮಾಣೀಕರಣ ಮಂಡಳಿ ಇರಬೇಕು' ಎನ್ನುತ್ತಾರೆ ಲಿಂಗದೇವರು.

ಲಿಂಗದೇವರು ಅವರು 'ನಾನು ಅವನಲ್ಲ ಅವಳು' ಸಿನಿಮಾ ಮಾಡಿದಾಗ ಮಂಡಳಿಯಲ್ಲಿ ಯು/ಎ ಸರ್ಟಿಫಿಕೇಟ್ ಸಿಗಬಹುದು ಎಂದು ನಿರೀಕ್ಷೆ ಮಾಡಿದ್ದರಂತೆ. ಏಕೆಂದರೆ ಸಿನಿಮಾದ ವಸ್ತು ಹಾಗಿತ್ತು. ಆದರೆ ಅವರ ಆಶ್ಚರ್ಯಕ್ಕೆ ಮಂಡಳಿ ಯು ಸರ್ಟಿಫಿಕೇಟ್ ಕೊಟ್ಟಿತು. 'ನನ್ನ ಸಿನಿಮಾಕ್ಕೆ ಯು ಕೊಟ್ಟರು ಅಂತಲ್ಲ. ಸರ್ಟಿಫಿಕೇಟ್ ಮಂಡಳಿ ಇದ್ದರೆ ನಾವು ಮಾಡಿರುವ ತಪ್ಪುಗಳ ಬಗ್ಗೆಯೂ ಗೊತ್ತಾಗುತ್ತದೆ. ಸೆನ್ಸಾರ್ ಮಂಡಳಿಯಲ್ಲಿ ಯಾರೋ ಒಬ್ಬರು ತಲೆಹರಟೆ ಮಾತನಾಡಿದರು ಎನ್ನುವ ಕಾರಣಕ್ಕೆ ಉಡ್ತಾ ಪಂಜಾಬ್ ಚಿತ್ರದ್ದು ವಿವಾದ ಉಂಟಾಯಿತು. ಅದರ ಅಧ್ಯಕ್ಷರು ರಾಜಕೀಯ ಮಾತನಾಡಬಾರದಿತ್ತು. ಹಾಗೆಂದು ಯಾವುದೇ ಚಿತ್ರಗಳಿಗೆ ಮುಕ್ತವಾಗಿ ಸರ್ಟಿಫಿಕೇಟೇ ಇಲ್ಲದಂತೆ ಬಿಡುವುದು ಸರಿಯಲ್ಲ. ಸರ್ಕಾರದ ಎಲ್ಲ ಇಲಾಖೆಗಳಲ್ಲೂ ವಿಜಿಲೆನ್ಸ್ ಇಲ್ಲವೆ? ಹಾಗೆಯೇ ಇದೂ ಕೂಡಾ, ತಪ್ಪೇನಿಲ್ಲ' ಎನ್ನುತ್ತಾರೆ ಲಿಂಗದೇವರು. 'ಆದರೆ ಮಂಡಳಿಯ ಕೆಲವು ನಿಯಮಗಳನ್ನು ಬದಲಾಯಿಸುವ ಅಗತ್ಯವಿದೆ. ಅವುಗಳನ್ನು ಬದಲಾಯಿಸಲು ಕೇವಲ ಸಿನಿಮಾದವರು ಮಾತ್ರವಲ್ಲ ಬೇರೆ ಕ್ಷೇತ್ರಗಳ ತಜ್ಞರೂ ಕುಳಿತು ಚರ್ಚಿಸಿ ತಿದ್ದುಪಡಿಗಳನ್ನು ಸೂಚಿಸಬೇಕು' ಎನ್ನುವುದು ಅವರ ಸಲಹೆ.

ನಿರ್ದೇಶಕಿ ಕವಿತಾ ಲಂಕೇಶ್ ಪ್ರಕಾರ, ಸೆನ್ಸಾರ್ ಅನ್ನುವ ಶಬ್ದವೇ ತಪ್ಪು ಬಳಕೆ. ಆದರೆ 'ಸರ್ಟಿಫಿಕೇಶನ್ ಬೋರ್ಡ್ ಇರಲೇಬೇಕು' ಎನ್ನುತ್ತಾರೆ ಅವರು. 'ಸಿನಿಮಾಗೆ ಮಾತ್ರವಲ್ಲ, ಟೀವಿ ಚಾನೆಲ್‌ಗಳಿಗೂ ಸರ್ಟಿಫಿಕೇಶನ್ ಬೋರ್ಡ್ ನಿಯಮಗಳು ಅನ್ವಯವಾಗಬೇಕು. ಹೆಣ್ಣುಮಕ್ಕಳನ್ನು ಎಷ್ಟೊಂದು ಕೀಳಾಗಿ ಚಿತ್ರಿಸಿ ಟೀವಿ ಧಾರಾವಾಹಿಗಳು ಬರುತ್ತಿವೆ ನೋಡಿ. ಟೀವಿ ಸುದ್ದಿಗಳನ್ನು ವೈಭವೀಕರಿಸಿ ತೋರಿಸಿ ಜನರ ಸಂವೇದನೆಗಳನ್ನೇ ಕಳೆದುಕೊಳ್ಳುವಂತೆ ಮಾಡುತ್ತಿದ್ದಾರೆ. ಯಾರಾದರೂ ಜಗಳ ಆಡಿದ್ರೆ ಜನ ಬಿಡಿಸೋದು ಬಿಟ್ಟು, ಟೀವಿ ಯವರಿಗೆ ಫೋನ್ ಮಾಡಿ ಎನ್ನುವಲ್ಲಿವರೆಗೆ ಪರಿಸ್ಥಿತಿ ಹೋಗಿದೆ. ಟೀವಿ, ಸಿನಿಮಾ ಎರಡಕ್ಕೂ ಸರ್ಟಿಫಿಕೇಟ್ ಮಂಡಳಿ ಬೇಕು' ಎನ್ನುತ್ತಾರೆ ಕವಿತಾ.

ಆದರೆ ಕವಿತಾ ಅವರೂ ಮಂಡಳಿಗೆ ಕೆಲವು ತಿದ್ದುಪಡಿಗಳನ್ನು ಸೂಚಿಸುತ್ತಾರೆ. '1950ರ ರೂಲ್ಸ್‌ಗಳನ್ನು ಇಟ್ಟುಕೊಂಡು ಈಗಲೂ ಮಂಡಳಿ ಕೆಲಸ ಮಾಡುತ್ತಿರುವುದು ಸರಿಯಲ್ಲ. 15 ವರ್ಷಗಳ ಹಿಂದೆ ನೀವು ಎ ಸರ್ಟಿಫಿಕೇಟ್ ಕೊಟ್ಟ ಸಿನಿಮಾಗಳನ್ನು ಈಗ ನೋಡಿದರೆ ಆಗಿನ ನಿರ್ಧಾರ ತಪ್ಪು ಅನ್ನಿಸುತ್ತದೆ. ಈಗ ಪರಿಸ್ಥಿತಿ ಬದಲಾಗಿಲ್ವೆ?' ಎಂದು ಪ್ರಶ್ನಿಸುತ್ತಾರೆ ಕವಿತಾ.



'ಬೋರ್ಡ್‌ನಲ್ಲಿ ಇರುವ ಸದಸ್ಯರು